

# ದಾಖಲೆಯ ಸರದಾರ!

ನಿಮಗೆ ಎಲ್ಲಾ ದೇಶದ ಬಾವುಟವನ್ನು ಒಂದೇ ಕಡೆ ನೋಡುವ ಆಸೆಯೇ? ರಾಷ್ಟ್ರದ ಭೂಪಟಗಳ ಪರಿಚಯ ಮಾಡಿಕೊಳ್ಳಬೇಕೆ? ಹಾಗಿದ್ದರೆ ಈ ವ್ಯಕ್ತಿಯನ್ನೊಮ್ಮೆ ನೋಡಿ.

ಈತನ ದೇಹದಲ್ಲಿ ಬರೋಬ್ಬರಿ 305 ರಾಷ್ಟ್ರಗಳ ಬಾವುಟ, 185 ರಾಷ್ಟ್ರಗಳ ಭೂಪಟ ಮತ್ತು 2985 ಅಕ್ಷರಗಳ ಬಣ್ಣಬಣ್ಣದ ಟ್ಯಾಟೂ ಕಾಣಿಸುತ್ತದೆ. ಇಡೀ ಪ್ರಪಂಚದ ಚಿಕ್ಕ ಪರಿಚಯವನ್ನು ಇವನ ದೇಹ ನೋಡಿ ಮಾಡಿಕೊಳ್ಳಬಹುದು.

70ರ ಹರೆಯದ ಈತ ವಾಸವಾಗಿರುವುದು ದೆಹಲಿಯಲ್ಲಿ. ಈತನ ಮೂಲ ಹೆಸರು ಹರ್‌ಪ್ರಕಾಶ್. ಒಟ್ಟು 22 ಗಿನ್ನಿಸ್ ವಿಶ್ವ ದಾಖಲೆಗಳನ್ನು ಮುಡಿಗೇರಿಸಿಕೊಂಡಿರುವ ಈತ ತನ್ನನ್ನು ತಾನು ಕರೆದುಕೊಳ್ಳುವುದು 'ಗಿನ್ನಿಸ್ ರಿಶಿ' ಎಂದು.

'ದೇಹಕ್ಕೆ ಮುಪ್ಪಾಗಿರಬಹುದು ಮನಸ್ಸಿಗಲ್ಲ' ಎನ್ನುವ ಈತ ಮಾಡಿರುವ ಸಾಧನೆಯೂ ಕಡಿಮೆ ಮಟ್ಟದಲ್ಲ. 489 ಪುಟಗಳ ಅತೀ ಉದ್ದನೆಯ ಮೃತ್ಯು ಪತ್ರ ಬರೆದಿದ್ದಾನೆ. ದೆಹಲಿಯಿಂದ ಸ್ಯಾನ್ ಫ್ರಾನ್ಸಿಸ್ಕೊ ನಗರಕ್ಕೆ ಪಿಟ್ಸಾ ಡೆಲಿವರಿ ಮಾಡಿದ್ದು, ಅತೀ ಹೆಚ್ಚು ವಯಸ್ಸಿನ (61ವರ್ಷ) ವ್ಯಕ್ತಿಯನ್ನು ದತ್ತು ತೆಗೆದುಕೊಂಡಿದ್ದು, ಒಂದು ಬಾಟಲ್ ಕೆಚಪನ್ನು 40 ಸೆಕೆಂಡಿಗಿಂತಲೂ ಕಡಿಮೆ ಅವಧಿಯಲ್ಲಿ ಖಾಲಿ ಮಾಡಿದ್ದು ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇಷ್ಟೇ ಅಲ್ಲದೆ 755 ಸ್ಟ್ರಾಗಳನ್ನು ಬಾಯಲ್ಲಿ ತುಂಬಿಸಿಕೊಂಡು ದಾಖಲೆ ಮಾಡುವ ಉದ್ದೇಶದಿಂದ ತನ್ನ ಬಾಯಲ್ಲಿರುವ ಎಲ್ಲಾ ಹಲ್ಲುಗಳನ್ನು ತೆಗೆಸಿದನಂತೆ. ಮುಖ, ಹೊಟ್ಟೆ, ಕೈಗಳ ಮೇಲೆಲ್ಲಾ ಹಚ್ಚೆ ಹಾಕಿಸಿಕೊಂಡಿರುವ ಈತ ಬೆನ್ನನ್ನು ಖಾಲಿ ಬಿಟ್ಟಿದ್ದಾನೆ. ವಿಶ್ವವಿಖ್ಯಾತ ಟ್ಯಾಟೂ ಕಲಾವಿದರ ಸಾಧನೆಯನ್ನು ಬೆನ್ನಿನಲ್ಲಿ ಹಾಕಿಸಿಕೊಳ್ಳಬೇಕೆಂಬುದು ಈತನ ಬಯಕೆ. ಆದರೆ ಗಂಡನ ಈ ಹಚ್ಚೆ ಪ್ರೀತಿ ಇವನ ಹೆಂಡತಿ ಬಿಮಲಾಳಿಗೆ ಸ್ವಲ್ಪವೂ ಇಷ್ಟವಿಲ್ಲ. ಇವನ ಜೊತೆಯಲ್ಲಿ ಹೊರಗೆ ಹೋಗಲು ಆಕೆಗೆ ನಾಚಿಕೆ ಆಗುತ್ತದಂತೆ.



ಮುನಿಸಿಪಾಲಿಟಿ ಚುನಾವಣೆಯಲ್ಲಿ ಸ್ಪರ್ಧಿಸಿ ಒಂದೂ ವೋಟು ಪಡೆಯದೇ ಕೆಟ್ಟ ಅಭ್ಯರ್ಥಿಯಾಗಿ ಗಿನ್ನಿಸ್ ದಾಖಲೆ ಮಾಡಬೇಕೆಂಬ ಇವನ ಆಸೆಗೆ ಹೆಂಡತಿಯೇ ತಣ್ಣೀರನ್ನೆರಚಿದ್ದಾಳೆ. ಹಾಗೇನಾದರೂ ಒಂದು ವೇಳೆ ಈತ ಸ್ಪರ್ಧಿಸಿದರೆ ಇವನಿಗೆ ತನ್ನ ಅಮೂಲ್ಯ ಮತ ನೀಡಿ ದಾಖಲೆಯ ಕನಸಿಗೆ ಅಡ್ಡಗಾಲನ್ನಿಡುತ್ತೇನೆ ಎನ್ನುತ್ತಾಳೆ.

ಜನರೆಲ್ಲ ಹುಚ್ಚ, ಜೋಕರ್ ಎಂದು ಕರೆದರೂ ತಲೆಕೆಡಿಸಿಕೊಳ್ಳದ ಗಿನ್ನಿಸ್ ರಿಶಿ, ಸತ್ತ ಮೇಲೆ ತನ್ನ ದೇಹವನ್ನು 'ಬಿಲೀವ್ ಇಟ್ ಆರ್ ನಾಟ್' ಮ್ಯೂಸಿಯಂಗೆ ದಾನ ಮಾಡಬೇಕೆಂದು ಪರಿಚಯಸ್ಥರಿಗೆ ಹೇಳಿದ್ದಾನಂತೆ. ಮ್ಯೂಸಿಯಂನವರು ತನ್ನ ದೇಹವನ್ನು ಸಂರಕ್ಷಿಸಿ ಎಲ್ಲರಿಗೂ ಪ್ರದರ್ಶನ ಮಾಡಲಿ ಎಂಬುದು ಈ ಭೂಪಟದ ಭೂಪತಿಯ ಹುಚ್ಚು ಬಯಕೆ.

■ ವಿದ್ಯಾ ವಿ ಹಾಲಭಾವಿ